CC No. 657/2023

## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ

**ಸಿ.ಸಿ.ನಂ.657/2023**

ಫಿರ್ಯಾದಿ: ಕರ್ನಾಟಕ ಸರ್ಕಾರ ಪರಃ ಸೇಡಂ ಪೊಲೀಸ್ ಠಾಣೆ

-::: ವಿರುದ್ಧ :::-

ಆರೋಪಿ : ಶಿವಕುಮಾರ @ ಶಿವರಾಜಕುಮಾರ ತಂದೆ ಬಸವರಾಜ ಛತ್ರಸಾಲಿ
ವಃ 23 ವರ್ಷ, ಉಃ ಕೂಲಿ ಕೆಲಸ ಮತ್ತು ಟ್ರಾಕ್ಟರ ಚಾಲಕ,
ಸಾಃಅಳ್ಳೊಳ್ಳಿ ಗ್ರಾಮ, ತಾಃ ಸೇಡಂ .

-----

### ದೋಷಾರೋಪಣೆ

ಅಭಿಯೋಜನೆಯವರು ಆರೋಪಿತನಾದ ನಿನ್ನ ಮೇಲೆ ಹೊರಿಸಿರುವ ಆರೋಪವೇನೆಂದರೆ, ದಿನಾಂಕ 29-12-2022 ರಂದು ಸೇಡಂ ಪೊಲೀಸ ಠಾಣೆಯ ವ್ಯಾಪ್ತಿಯ ಹದ್ದಿಯ ಪೈಕಿ ಆರೋಪಿತನು ಟ್ರಾಕ್ಟರ ನಂ AP-27/UB-1260 ನೇದ್ದಕ್ಕೆ ಅಳವಡಿಸಿದ ನಂದಿ ಎಂಟರ ಪ್ರೈಸೆಸ ಅಂತಾ ಬರೆದ ಹಳದಿ ಬಣ್ಣದ ನಂ . ಇಲ್ಲದ ನೀರಿನ ಟ್ಯಾಂಕರದಲ್ಲಿ ಚಾಸಾ ನಂ 9 ರವರ ಹೊಲದಲ್ಲಿದ್ದ ಬೋರಿನಿಂದ ನೀರು ತುಂಬಿಕೊಂಡು ತನ್ನ ಪಕ್ಕದಲ್ಲಿ ಚಾಸಾ ನಂ 7 ರವರನ್ನು ಕೂಡಿಸಿಕೊಂಡು ಮತ್ತು ಟ್ರಾಕ್ಟರ ಕೊಂಡಿಯ ಹತ್ತಿರ ನೀರಿನ ಟ್ಯಾಂಕರಿನ ಕಬ್ಬಿಣದ ಪಟ್ಟಿಯ ಮೇಲೆ ಚಾ ಸಾನಂ 1 ರವರ ಮಗನಾದ ಮೃತ ಸಂಗಣ್ಣಾ ಹಾಗೂ ಚಾಸಾ ನಂ 6 ರವರನ್ನು ನಿಲ್ಲಿಸಿ ಕರೆದುಕೊಂಡು ಸೋಲಾರ ಪ್ಲೇಟ್ ತೊಳೆಯಲು ಸೋಲಾರ ಕಂಪನಿಗೆ ಕಲಕಂಬ ಅಳ್ಳೊಳ್ಳಿ ಮುಖ್ಯ ರಸ್ತೆಯ ಮೇಲೆ ತನ್ನ ವಶದಲ್ಲಿದ್ದ ಟ್ರಾಕ್ಟರನ್ನು ಅತೀವೇಗ ಹಾಗೂ ನಿಷ್ಕಾಳಜಿತನದಿಂದ ಚಲಾಯಿಸಿಕೊಂಡು ಬರುವಾಗ ಮುಂಜಾನೆ 09.30 ಗಂಟೆ ಸುಮಾರಿಗೆ ಸೋಲಾರ ಕಂಪನಿಯ ಮುಖ್ಯ ಗೇಟ್ ಹತ್ತಿರ ಒಮ್ಮೇಲೆ ಟ್ರಾಕ್ಟರನ ಹುಕ್ಕ ಮುರಿದು ಟ್ರಾಕ್ಟರ ಜೊತೆಗಿದ್ದ ನೀರಿನ ಟ್ಯಾಂಕ ಪಲ್ಟಿಯಾಗಿದ್ದು ಇರುತ್ತದೆ ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 279, ಕಾಯ್ದೆ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

ಎರಡನೆಯದಾಗಿ ಮೇಲೆ ಹೇಳಲಾದ ದಿನ , ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಲಾಯಿಸುತ್ತಿದ್ದ ಟ್ರಾಕ್ಟರ ಟ್ಯಾಂಕ ಪಲ್ಟಿಯಾಗಿ ಟ್ಯಾಂಕರಿನ ಕಬ್ಬಿಣದ ಪಟ್ಟಿಯ ಮೇಲೆ ನಿಂತಿದ್ದ ಚಾಸಾ ನಂ 1 ರವರ ಮಗ ಮೃತ ಸಂಗಣ್ಣಾ ಹಾಗೂ ಚಾಸಾ ನಂ 6 ರವರಿಗೆ ಗಂಭೀರ ಸ್ವರೂಪದ ಗಾಯಗಳಾಗಿದ್ದು ಇರುತ್ತದೆ ಕಾರಣ ಆರೋಪಿತನಾದ ನೀನು ಭಾ.ದಂ.ಸಂ. ಕಲಂ. 338 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ.

24/8